ಓದಿ ನಾವು ತಿಳಿದುಕೊಂಡಾದ ಮೇಲೆ, ಹೊಸ ವಿಷಯವೊಂದನ್ನು ಅರಿತುಕೊಂಡ ಮಾನಸಿಕ ತೃಪ್ತಿಯಷ್ಟೆ ಅದರ ನಿಲುಗಡೆಯಾಗುತ್ತದೆ. ಅಂದರೆ ಮತ್ತೆ ಮತ್ತೆ ಅದನ್ನೇ ಓದಬೇಕೆಂದು ನಮಗೆ ಎಂದೂ ಅನಿಸುವುದೇ ಇಲ್ಲ. ಆದರೆ ಸ್ವಾಮಿ ವಿವೇಕಾನಂದರ ಗದ್ಯವನ್ನು ಎಷ್ಟು ಸಾರಿ ಓದಿದರೂ ಅದು ಹಳೆಯದೆಂಬ ಭಾವನೆಯೇ ಬರುವುದಿಲ್ಲ. ಅದು ನಿತ್ಯವೂ ನಿತ್ಯಹರಿದ್ವರ್ಣದ ಕಾನನದಂತಿರುತ್ತದೆ. ಅಂದರೆ ಎಂದಿಗೂ ತನ್ನ ತಾಜಾತನ ಮತ್ತು ಜೀವಂತಿಕೆಯನ್ನೂ, ಲೋಕಪರವಾದ ಕಾಳಜಿಯನ್ನೂ ಅದು ಕಳೆದುಕೊಳ್ಳುವುದೇ ಇಲ್ಲ.

ಪದ್ಯದಲ್ಲಿರಬಹುದಾದ ಪರಿವರ್ತಿತಾನುಭವ ಸ್ವಾಮೀಜಿಯವರ ಗದ್ಯದಲ್ಲಿರುವುದೇ ಅದರ ನಿತ್ಯನೂತನತೆಗೆ ಮುಖ್ಯ ಕಾರಣ. ಇಂಥ ಪರಿವರ್ತಿತಾನುಭವದ ಗುಣದಿಂದಾಗಿಯೇ ನಮ್ಮ ಅಂದಂದಿನ ಅನುಭವಕ್ಕೆ ಅನುಸಾರವಾಗಿ ಕಾವ್ಯದಂತೆಯೇ ಇವರ ಮಾತು, ಪತ್ರ, ಭಾಷಣಗಳ ಗದ್ಯಕಾಂಡ ಹೊಸಹೊಸತಾಗಿ ಪ್ರತೀತವಾಗುತ್ತದೆ. ಯಾರ ಗದ್ಯಾಭಿವ್ಯಕ್ತಿಗೂ ಇರದ ಈ ರೀತಿಯ 'ನವನವ ಉನ್ಮೇಷ'ಕ್ಕೆ ಇರುವ ಇನ್ನೊಂದು ಮುಖ್ಯ ಕಾರಣವೆಂದರೆ, ಇವರ ಗದ್ಯ, ಪದ್ಯದಂತೆಯೇ ಅಂದರೆ, ಕೇವಲ ಬುದ್ಧಿಜನ್ಯವಾಗದೆ ಅಪ್ಪಟ ಪ್ರತಿಭಾಜನ್ಯವಾದುದೇ ಆಗಿರುವುದು. ಅದೇ ಲೋಕ, ಅದೇ ಧರ್ಮ, ಅದೇ ಆಚಾರ ವಿಚಾರ, ಅದೇ ಸುಪರಿಚಿತ ಮಾತು ರೀತಿ–ನೀತಿ ಚಿಂತನಗಳಾದರೂ, ಸ್ವಾಮಿ ವಿವೇಕಾನಂದರು ಈ ಎಲ್ಲ ಅಪರಿಚಿತವಲ್ಲದ ಸಾಮಗ್ರಿಗಳಿಂದ, ಅಪರಿಚಿತವಾದ, ಸ್ಫೂರ್ತಿಪೂರ್ಣವಾದ, ವಿಕಾಸಪೂರ್ಣವಾದ, ಕಾಂತಿಪೂರ್ಣವಾದ ವಿನೂತನ ಅರ್ಥವನ್ನು ತಮ್ಮೆಲ್ಲ ಪದ ಪುಂಜಗಳಲ್ಲಿ ನಮ್ಮೆದುರು ಕಟ್ಟಿನಿಲ್ಲಿಸುತ್ತಾರೆ. ತಮ್ಮ ಪ್ರತಿಭೆಯ ಆಳಗಲಗಳನ್ನು ಪರಿಚಯಿಸಿ, ಅತಿಶಯವಾದ ಭಾವಸ್ಥಿತಿಯಲ್ಲಿ, ಜಾಗೃತವಾದ ವಿವೇಚನೆಯಲ್ಲಿ, ಉತ್ಸಾಹಪೂರ್ಣವಾದ, ದೃಢ ವಾದ, ಸ್ವಾತ್ಮಸ್ವಾಮ್ಯದಲ್ಲಿ ಉದಾತ್ತವಾದ ಭಾವದಿಂದ ತಮ್ಮ ಅಂತರಂಗದಾಶಯಗಳನ್ನು ಪ್ರಕಟಿಸುತ್ತ, ತಮ್ಮ ವಿಶೇಷತೆಯನ್ನು ಮೆರೆಯುತ್ತಾರೆ. ಆ ಮೂಲಕ ತಮ್ಮ ಅಸಾಮಾನ್ಯ ಸಂಘಟನಾ ಸಾಮರ್ಥ್ಯವುಳ್ಳ ಹೊಕ್ಕಳಿನಿಂದ ಹೊರಟ ಕಂಚಿನ ಕಂಠದಂತಹ ಮಾತಿನ ಮಾಂತ್ರಿಕ ಶಕ್ತಿಯನ್ನು ಸಹೃದಯರ ಹೃನ್ಮನಗಾಣಿಸಿ, ಅವರ ಆತ್ಮವನ್ನೇ ಸೆಳೆಯುತ್ತಾರೆ.

ಒಟ್ಟಾರೆಯಾಗಿ ಹೇಳುವುದಾದರೆ, ತಮ್ಮ ಪ್ರಾಂಜಲ ಮನಸ್ಸಿನ ಪ್ರಾಮಾಣಿಕ ವಾಗ್ವಿಲಾಸದಲ್ಲಿ, ಸೋದರಿ ನಿವೇದಿತಾ ಅವರು ತಮ್ಮ 'ನಾ ಕಂಡಂತೆ ನನ್ನ ಗುರುದೇವ' ಕೃತಿಯಲ್ಲಿ ಹೇಳುವಂತೆ, "ಇತರರು ಮಾರ್ಗೋಪಾಯಗಳ ಬಗ್ಗೆ ಹೇಳುವಲ್ಲಿ, ಅವರು ಅಗ್ನಿಯನ್ನೇ ಸ್ಫುಟಗೊಳಿಸುತ್ತಾರೆ; ಇತರರು ಮಾರ್ಗದರ್ಶನ ನೀಡು ವಲ್ಲಿ ಅವರು ಸತ್ಯದರ್ಶನವನ್ನೇ ಮಾಡಿಸಿಬಿಡುತ್ತಾರೆ." ಪ್ರೊಫೆಸರ್ ಜಾನ್ ರೈಟ್ ಅವರ ಪತ್ನಿ ಮಿಸೆಸ್ ರೈಟ್ ತಮ್ಮ ತಾಯಿಗೆ ಬರೆದ ಪತ್ರದ ಕೊನೆಯಲ್ಲಿ ತಿಳಿಸಿರುವಂತೆ, 'ಅವರೊಂದು ಮಹಾ ಭೂಮದರ್ಶನ' ಎಂಬುದರಲ್ಲಿ ಅತಿಶಯೋಕ್ತಿಯಿಲ್ಲ.

ಸ್ವಾಮೀಜಿಯವರ ಮಾತಿನಲ್ಲಿರುವ ಭಾವಪ್ರಗಲ್ಭತೆಯ ಬಗ್ಗೆ ಶ್ರೇಷ್ಠ ಕವಿ ರೋಮಾರೋಲಾ ಅವರ ಮಾತಿನಲ್ಲೇ ಹೇಳುವುದಾದರೆ, "ಆತನ ಪದಗಳೇ ಒಂದು ದಿವ್ಯ ಸಂಗೀತ – ಬಿಥೋವೆನ್ ಶೈಲಿಯ ಪದಗುಚ್ಛಗಳು, ಹ್ಯಾಂಡಲ್ ನಡೆಯಂಥ ಕಂಪನದ ಲಯಗಳು, ಕಾಲದಲ್ಲಿ ಮೂವತ್ತು ವರ್ಷ ದೂರವಿದ್ದು, ಪುಸ್ತಕಗಳಲ್ಲಿ ಚದುರಿ ಹೋಗಿದ್ದರೂ ಸಹ, ದೇಹದಲ್ಲಿ ವಿದ್ಯುದಾಘಾತದಂತಹ ನರಗಂಪವನ್ನು ಅನುಭವಿಸದೆ ನಾನವರ ಈ ಹೇಳಿಕೆಗಳನ್ನು ಸ್ಪರ್ಶಿಸಲಾರೆ ಎಂದ ಮೇಲೆ ಆ ಧೀರನ ತುಟಿಗಳಿಂದ ಸುಡು ಸುಡುವ ಪದಗಳು ಹೊಚ್ಚ ಹೊಸದಾಗಿ ಹೊರಹೊಮ್ಮಿದಾಗ ಅದೆಂಥಾ ಆಘಾತ, ಅದೆಂಥ ಆವಾಹನೆಗಳನ್ನು ಅವು ಉಂಟು ಮಾಡಿರಬೇಕು!" ಹೌದು, ಸತ್ಯಸ್ಯಸತ್ಯವಾದ ಈ ಮಾತು ಈಗಲೂ ಯಾವಾಗಲೂ ನಾವೆಲ್ಲ ಒಪ್ಪಬಹುದಾದದ್ದೆ. ಇದಕ್ಕೆ ಉದಾಹರಣೆಯೆಂಬಂತೆ ಸ್ವಾಮೀಜಿಯವರ ಈ ಮಾತುಗಳನ್ನು ನಾವು ಗಮನಿಸಬಹುದು: "ಪುಣ್ಯಭೂಮಿಯೆಂದು ಕರೆಸಿಕೊಳ್ಳುವ ಯೋಗ್ಯತೆಯಿರುವ ಯಾವುದಾದರೂ ದೇಶ ಈ ಭೂಮಿಯ ಮೇಲಿದ್ದರೆ, ಸಾಧುತನದಲ್ಲಿ, ಔದಾರ್ಯದಲ್ಲಿ, ಶುದ್ಧತೆಯಲ್ಲಿ, ಶಾಂತಿಯಲ್ಲಿ, ಅಂತರಂಗ ಪರಿವೀಕ್ಷಣೆ, ಆಧ್ಯಾತ್ಮಿಕತೆಗಳಲ್ಲಿ ಮಾನ ವನು ಪರಾಕಾಷ್ಠೆಯನ್ನು ತಲುಪಿರುವ ಯಾವುದಾದರೂ ನೆಲ ಈ ಭೂಮಿಯ ಮೇಲಿದ್ದರೆ, ಅದೇ ಭಾರತ."

ಸ್ವಾಮೀಜಿಯವರ ಈ ಮಾತು ಆ ಮಾತು ಅಂತಲ್ಲ, ಅವರು ಎಲ್ಲೆಡೆ ಬಳಸುವ ಎಲ್ಲ ಬಗೆಯ ಮಾತಿನ ರೀತಿ ನೀತಿಯೂ ಅತ್ಯಂತ ಕಲಾತ್ಮಕ ಹಾಗೂ ಕಸುವಾತ್ಮಕವಾಗಿ, ವಿಶಿಷ್ಟವಾಗಿ ಧ್ವನಿಪೂರ್ಣವಾಗಿದೆ. ಅವರು ತಮ್ಮದೇ ಆದ ಶೈಲಿಯಲ್ಲಿ ಅದನ್ನು ರಸಾತ್ಮಕವಾಗಿ, ಅಲಂಕಾರಮಯವಾಗಿ ಬಳಸಿರುವುದರಿಂದಲೇ ಅದಕ್ಕೆ ಕಾವ್ಯತ್ವ ಸಿದ್ಧಿಸಿರುವುದು. ಅವರ ಮಾತಿನಲ್ಲಿ ಎಲ್ಲಿಯೂ ವಿಷಯ ಮತ್ತು ರೀತಿ ಎಂದು ಒಂದ ರಿಂದೊಂದನ್ನು ಬೇರ್ಪಡಿಸಲು ಸಾಧ್ಯವಿಲ್ಲ. ಅವರದು ಕಣ್ಣಿಗೆ ಅಥವಾ ಕಿವಿಗೆ ಬೀಳುತ್ತಿದ್ದಂತೆಯೇ ರೋಮಾಂಚನವನ್ನೂ, ಜೊತೆಗೆ ಪ್ರಜ್ಞಾಪೂರ್ಣವಾದ ಸಂತೋಷವನ್ನೂ ಒದಗಿಸುವಂಥ ಅತಿಶ್ರೇಷ್ಠ ಶೈಲಿ. ಹಾಗಾಗಿಯೇ ಓದಿದ ಅಥವಾ ಕೇಳಿದ ಹೃದಯವನ್ನೇ ಸಂಸ್ಕರಿಸಿ ಅದು ಗೆಲ್ಲಬಲ್ಲದು. ಇಂಥದೊಂದು ಶೈಲಿ ನಿಶ್ಚಯವಾಗಿ ಪ್ರತಿಭೆ ಹಾಗೂ ಕಲೆಗಾರಿಕೆಗಳೆರಡರ ಸಾಹಚರ್ಯ ದಿಂದ ಮಾತ್ರ ಅವರಿಗೆ ದಕ್ಕಿದೆ. ಅವರ ಅಸಾಮಾನ್ಯ ವ್ಯಕ್ತಿತ್ವದ ವಿವಿಧಾಂಗಗಳೆಲ್ಲವೂ ಒಮ್ಮುಖವಾಗಿ, ಖಂಡಿತವಾಗಿ ಒಗ್ಗೂಡಿ ಪರಿಶ್ರಮಿಸಿದ್ದರ ಫಲಿತಾಂಶವಾಗಿ ಮಾತ್ರ ಅದು ಅವರಿಗೆ ಸಿಕ್ಕಿದೆ.

ಅಮೂರ್ತವಾದ ಅಂತರಂಗದ ಭಾವಸಂಮೋಹವನ್ನೂ ಬಹಿ ರಂಗದ ಮೂರ್ತ ಸಾಮಗ್ರಿಯಾದ ಭಾಷೆಯನ್ನೂ ಸೃಜನಾತ್ಮಕವಾಗಿ ಸಂಘಟಿಸುವ ಅವರ ಕವಿವ್ಯಕ್ತಿತ್ವ ವಿಶೇಷವಾಗಿ ಅವರ ಕಾವ್ಯದೆಲ್ಲೆಡೆ ನಮಗೆ ದಟ್ಟವಾಗಿ ಗೋಚರಿಸುವುದನ್ನೂ, ಬಹುಪಾಲು ಮಿಂಚುವುದನ್ನೂ, ಗುಡುಗಿ ಮಳೆ ಸುರಿಸಿ ಜೀವಪರವಾಗಿ ವಿಜೃಂಭಿಸುವುದನ್ನೂ ನಾವು ಉದ್ದಕ್ಕೂ ಗಮನಿಸುತ್ತ ಹೋದಂತೆ, ಅವರಿಗೊದಗಿದ್ದ ಅಭಿವ್ಯಕ್ತಿಯ ತುರ್ತು ಅದಮ್ಯವಾದದ್ದೆಂದೂ, ಅದು ಅಭಿವ್ಯಕ್ತಿಯನ್ನು ಅನಿವಾರ್ಯವೆಂಬಂತೆ ಅಪೇಕ್ಷಿಸುವಂತದ್ದೆಂದೂ ಮನವರಿಕೆಯಾಗದಿರದು. ಕೆಲವೆಡೆಯಂತೂ ಅವರ ಅಂತರಂಗದಲ್ಲಿ ಎಂದಿನಿಂದಲೋ ಸಂಚಯನಗೊಂಡ ಅನುಭವದ್ರವ್ಯ ಯಾವುದೋ ನೆಪಕ್ಕೆ ಕಾದು, ಭಾವದ ಅಲ್ಲೋಲಕಲ್ಲೋಲದಿಂದ ತನ್ನ ಅನುಭವಕ್ಕೆ

ಅಕ್ಷರಗಳ ಆಕಾರ ಪಡೆದುಕೊಂಡೇ ತೀರಿದೆ. ಹಾಗಾಗಿಯೇ ಅತೀ ಒತ್ತಡದ ತೀವ್ರತೆಯಿಂದ ಹೊರಬಂದ ಆ ಭಾವತುಮುಲ ಅಲ್ಲಲ್ಲಿ ಅಖಚಿತವೂ ಅಸ್ಫುಟವೂ ಆಗಿದೆ. ಇದಕ್ಕೆ ಅವರ ಅತ್ಯುತ್ತಮ ಕವನದಲ್ಲೊಂದಾದ 'ಶಾಂತಿ' ಕವಿತೆಯ ಕೆಲ ಸಾಲುಗಳನ್ನು ಗಮನಿಸಬಹುದು:

**ಅದೋ ನೋಡು! ಪೌರುಷದಿ**
**ಧಾವಿಸುತ್ತಿದೆ ತಾನು–**
**ಶಕ್ತಿಯಿಲ್ಲದ ಶಕ್ತಿ,**
**ಕತ್ತಲೊಳಗಿನ ಬೆಳಕು,**
**ಕೋರೈಸಿ ಹೊಳೆಹೊಳೆವ**
**ಬೆಳಕಿನಾ ನೆರಳು!**
**ನುಡಿಯಲಾಗದ ಹರ್ಷ; ಅನುಭವಿಸದಂಥ ದುಃಖ,**
**ಬಾಳದಂಥ ಚಿರ ಬದುಕು,**
**ರೋದಿಸದ ಚಿರಮರಣ!**
**ಸುಖ–ದುಃಖ ತಾನಲ್ಲ–**
**ಅದರ ನಡುವಿನದು;**
**ದಿವಸ ರಾತ್ರಿಗಳಲ್ಲ**
**ಅದ ಸೇರಿಸುವುದು!**

ಹಾಗೆಯೇ ಅವರ ಸುಪ್ರಸಿದ್ಧವಾದ 'ತಾಯಿ ಕಾಳಿ' ಪದ್ಯದ ನುಡಿಯೊಂದನ್ನು ನೋಡಬಹುದು:

**ಹುಚ್ಚುವರಿದು ಕುಣಿಯುತ ಸಂಕಟಗಳನೀಡಾಡುತ**
**ಬಾ, ತಾಯಿ, ಬಾ!**
**ನಲಿನಲಿಯುತ ಬಾ!**
**ಕರಾಳ ಕಾಳಿ ನಿನ್ನ ಹೆಸರು,**
**ಮೃತ್ಯುವೇ ನಿನ್ನುಸಿರು!**
**ನಿನ್ನಡಿಗಳ ಕಂಪನದಿಂ**
**ನಿರ್ನಾಮವು ಜಗವು!**
**ಕಾಲರೂಪಿ, ತಾಯೆ ನೀನು!**
**ನುಂಗುವೆ ಎಲ್ಲವನು!**

ಅವರ ಎದೆಯಲ್ಲೊಂದು ಮುಗ್ಧ ಮಗು ಯಾವಾಗಲೂ ಜೀವಂತವಿತ್ತು. ಹಾಗೆಂದೇ ಅವರು ನಮಗೆ ನಿಲುಕದೆತ್ತರಕ್ಕೆ ದೊಡ್ಡವರಾಗಿ ಬೆಳೆಯಲು ಸಾಧ್ಯವಾದದ್ದು. ಈ ಕಾರಣದಿಂದಾಗಿಯೇ ಉದಾತ್ತತೆ, ಪ್ರಾಮಾಣಿಕತೆ, ಭಾವಶ್ರೀಮಂತಿಕೆ, ಮಾನವೀಯ ಅನುಕಂಪ, ದುಃಖದಾವೇಗ, ವಿಸ್ಮಯತೆ, ವೈಚಾರಿಕ ಸಂಪನ್ನತೆ, ಕಾವ್ಯಾತ್ಮಕತೆ ಮತ್ತು ಮುಕ್ತತೆಗಳು ಅವರ ಪದಪದದಲ್ಲೂ ಪದಾರ್ಪಣೆ ಮಾಡುತ್ತಿದ್ದವು. ಇದಕ್ಕವರ ಕಾವ್ಯವನ್ನೇಕೆ, ಅವರು ತಮ್ಮ ಶಿಷ್ಯೆ ಜೋಸೆಫೈನ್ ಮ್ಯಾಕ್ಲೌಡ್‌ಗೆ ೧೯೦೦ ರ ಏಪ್ರಿಲ್ ೧೮ರಂದು ಬರೆದ ಪತ್ರದ ಕೆಲಸಾಲುಗಳನ್ನು ಬೇಕಾದರೂ ನೋಡಬಹುದು: "ರಣಗಳಲ್ಲೇನು? ಗೆಲ್ಲುತ್ತೇವೆ, ಸೋಲುತ್ತೇವೆ! ನನ್ನ ಸಾಮಾನುಗಳನ್ನೆಲ್ಲ ಕಟ್ಟಿಟ್ಟು ಕಾಯುತ್ತಿದ್ದೇನೆ ಆ ಪರಮ ಬಂಧವಿಮೋಚಕನಿಗಾಗಿ. 'ಶಿವಶಿವ! ದಾಟಿಸೆನ್ನ ದೋಣಿಯನು ಆಚೆಯ ತೀರಕೆ...' ಜೋ, ನಾನಿನ್ನೂ ಬರಿ ಹಸುಳೆ! ಗಂಗಾ ತೀರದ ದಕ್ಷಿಣೇಶ್ವರದಲ್ಲಿ ವಟತರುತಲಚ್ಛಾಯೆಯಲ್ಲಿ ಶ್ರೀರಾಮಕೃಷ್ಣರ ಅಚ್ಚರಿಯ ವಾಣಿಯನ್ನು ಮಂತ್ರಮುಗ್ಧನಾಗಿ ಆಲಿಸುತ್ತಿದ್ದ ಅದೇ ಹುಡುಗ ನಾನಿನ್ನೂ. ಅದೇ ನನ್ನ ನಿಜವಾದ ಸ್ವಭಾವ; ಕೆಲಸಕಾರ್ಯಗಳು, ಲೋಕೋಪಕಾರ ಮುಂತಾದುವೆಲ್ಲ ಮೇಲ್ಕವಚಗಳಷ್ಟೇ. ನಾನೀಗ ಮತ್ತೆ ಕೇಳುತ್ತಿರುವೆ ಆತನ ದಿವ್ಯವಾಣಿಯನ್ನು; ಅದೇ ಆತ್ಮಕಲಕುವ ಅಂದಿನದೇ ವಾಣಿ... ನನ್ನ ಕೆಲಸದ ಹಿಂದೆ ಮಹತ್ವಾಕಾಂಕ್ಷೆಯಿತ್ತು, ನನ್ನ ಪ್ರೇಮದ ಹಿಂದೆ ವ್ಯಕ್ತಿತ್ವವಿತ್ತು, ನನ್ನ ಶುದ್ಧತೆಯ ಹಿಂದೆ ಭಯವಿತ್ತು, ನನ್ನ ಮಾರ್ಗದರ್ಶನದ ಹಿಂದೆ ಅಧಿಕಾರಲಾಲಸೆಯಿತ್ತು! ಈಗ ಅವೆಲ್ಲವೂ ಮಾಯವಾಗುತ್ತಿವೆ; ನಾನು ಸುಮ್ಮನೆ ತೇಲುತ್ತಿದ್ದೇನೆ – ಬಂದೆ ತಾಯೀ ಬಂದೆ! ಬರುತ್ತೇನೆ, ನೋಟಗಾರನಾಗಿ, ಆಟಗಾರನಾಗಿಯಲ್ಲ!

ಶೀಲದ ಕುರಿತಾಗಿ ಸ್ವಾಮೀಜಿ ೧೮೯೮ ರಲ್ಲಿ ಸ್ವಾಮಿ ಬ್ರಹ್ಮಾನಂದರಿಗೆ ಬರೆದ ಅಮರ ಪತ್ರದ ಜ್ವಲಂತ ಶಬ್ದಗಳ ಬೆಳಕಿನ ಈ ಸಾಲುದೀಪಕ್ಕೆ ಕೈ ಮುಗಿಯದವರ್ಯಾರು?! ಗಮನಿಸಿ: "ಹಣವಲ್ಲ, ಹೆಸರು ಕೀರ್ತಿಗಳಲ್ಲ, ಪಾಂಡಿತ್ಯವಲ್ಲ, ಶೀಲಮಾತ್ರವೇ ಕಷ್ಟಪರಂಪರೆಗಳ ಅಭೇದ್ಯ ಗೋಡೆಗಳನ್ನೊಡೆದು ಮುಂದಕ್ಕೆ ಕರೆದೊಯ್ಯಬಲ್ಲುದು." ಜೀವನದ ಕುರಿತಾಗಿ ಅವರ ಒಂದು ಪತ್ರದಲ್ಲಿ ಮೂಡಿದ ಈ ನಕ್ಷತ್ರ ಸಾಲುಗಳನ್ನು ನೋಡಿ: "ಜೀವನವೆಂದರೆ ಹೋರಾಟಗಳ, ಭ್ರಮನಿರಸನಗಳ ಸರಮಾಲೆ... ಬದುಕಿನ ರಹಸ್ಯವೆಂದರೆ ಅನುಭವದ ಮೂಲಕ ಬರುವ ಶಿಕ್ಷಣ, ಸುಖಾನುಭವವಲ್ಲ."

ಕಾವ್ಯಾತ್ಮಕವಾಗಿ ಸಾಮಾನ್ಯ ಗದ್ಯದ ಸಾಲುಗಳಲ್ಲೂ, ಅಂದರೆ ಇಂಥಲ್ಲೆಲ್ಲ, ಅವರು ಭಾಷೆಯನ್ನು ನೀರಿನಂತೆ ಬಳಸದೆ ತುಪ್ಪದಂತೆ ಬಳಸುವ ಜಾಣ್ಮೆ, ಶಬ್ದಕೋಶಕ್ಕಿಂತ ಭಾವಕೋಶವನ್ನೇ ಹೆಚ್ಚಾಗಿ ಬಳಸಿಕೊಳ್ಳುವ ಅವರ ರಚನಾ ಪದ ಚತುರಿಕಾ ಕೌಶಲ್ಯ, ಅದು ತರುವ ಹೊಳಪುಗಳು – ಇವು ಎಲ್ಲರನ್ನೂ ಅವಾಕ್‌ಗೊಳಿಸುವಂಥವು. ಅವರಲ್ಲಿರುವ ತತ್ತ್ವ, ವಿದ್ವತ್ ಮತ್ತು ಸತ್ವಪೂರ್ಣ, ವಿದ್ಯುತ್‌ಪೂರ್ಣ ಪದಬಳಕೆಗೆ ಶರಣೆನ್ನದವರ್ಯಾರು?!

ಪ್ರೇಮದ ಕುರಿತಾಗಿ ಅವರಾಡುವ ತ್ರಿಕಾಲಸತ್ಯವಾದ ಈ ಮಾತುಗಳನ್ನು ದರ್ಶಿಸಿ: "ಪ್ರೇಮ ತ್ರಿಭುಜದ ಪ್ರಥಮ ಕೋನವೇ ಪ್ರೇಮಕ್ಕೆ ವ್ಯಾಪಾರದೃಷ್ಟಿ ಇಲ್ಲ ಎನ್ನುವುದು – ಪ್ರೇಮ, ಪ್ರೇಮಿ ಮತ್ತು ಪ್ರೇಮಪಾತ್ರ ಈ ಮೂರೂ ಒಂದೇ..."


ಮಿರಮಿರನೆ ಮಿಂಚುವ ಇಂಥ ಉದಾತ್ತ ಮಾತುಗಳ ಮುತ್ತು ರತ್ನ ವಜ್ರ ವೈಡೂರ್ಯಗಳ ಗಣಿಗೆ ಶರಣಾಗದವರ್ಯಾರು?! ಮಿಂಚಿನೆಳೆಗಳಂಥ ಈ ಹೊಳಹಿನ ಮಾತುಗಳನ್ನು ಕಾವ್ಯವೆನ್ನದವರ್ಯಾರು?! ಅವರ ಅನೇಕ ಮಾತುಗಳನ್ನು, ಈ ಮಾತುಗಳಿಗೆ ಪೂರಕವಾಗುವಂತೆ ಉದಾಹರಣೆ ನೀಡುತ್ತಲೇ ಹೋಗಬಹುದು.

(ಮುಂದುವರೆಯುವುದು)

**ಇಂದಿನ ಪರ್ವತಗಳು ಒಂದು ಕಾಲದಲ್ಲಿ ಕಡಲತಡಿಗಳಾಗಿದ್ದವು. ಪುನಃ ಮುಂದೆ ಹಾಗೆಯೇ ಆಗುವುವು. ಪ್ರಪಂಚದಲ್ಲಿ ಪ್ರತಿಯೊಂದೂ ಬದಲಾಯಿಸುತ್ತಿದೆ. ಪ್ರಪಂಚವೇ ನಿರಂತರ ಬದಲಾಯಿಸುತ್ತಿದೆ. ಆದರೆ ಬದಲಾವಣೆಯಾಗದ ಒಂದು ವಸ್ತುವಿದೆ. ಅದೇ ದೇವರು.**

***– ಸ್ವಾಮಿ ವಿವೇಕಾನಂದ***





೨೧ನೇ ಶತಮಾನದ ಜಾಗತೀಕರಣದ ಈ ಆಧುನಿಕ ಯುಗದಲ್ಲಿ ಮನುಷ್ಯ ಅಸಂಖ್ಯ ತಲ್ಲಣಗಳಿಂದ ತತ್ತರಿಸುತ್ತಿರುವನು. ಇಡೀ ಜಗತ್ತೇ ಒಂದು ಹಳ್ಳಿಯಾಗಿ ಮಾರ್ಪಟ್ಟಿದೆ. ಅದರ ಪರಿಣಾಮವಾಗಿ ಸಾಮಾಜಿಕ, ಆರ್ಥಿಕ, ಧಾರ್ಮಿಕ, ರಾಜಕೀಯ, ತಾತ್ತ್ವಿಕ, ಕೌಟುಂಬಿಕ ನೆಲೆಗಳಲ್ಲಿ ಉಂಟಾದ ಬದಲಾವಣೆಗಳು ಮನುಷ್ಯನನ್ನು ದಿಙ್ಮೂಢಗೊಳಿಸಿವೆ. ಅಸಂಖ್ಯ ವೈಜ್ಞಾನಿಕ ಸಂಶೋಧನೆಗಳಿಂದ ಸೌಲಭ್ಯಗೊಂಡ ಮನುಷ್ಯನು ಇಂದು ಒಂದೆಡೆ ಹಿಂದೆಂದೂ ಕಾಣದಂತಹ ಭೌತಿಕ ಸುಖಭೋಗಗಳ ತುತ್ತತುದಿಯಲ್ಲಿರುವನು; ಅದೇ ಕ್ಷಣದಲ್ಲಿ ಮತ್ತೊಂದೆಡೆ ಮನುಷ್ಯನ ಇತಿಹಾಸದಲ್ಲಿಯೇ ಕಂಡರಿಯದಂತಹ ಅಧಃಪತನದ ಕೊನೆಯನ್ನು ಕಾಣುತ್ತಿರುವನು. ಹಲವು ಗೊಂದಲಗಳ ಗೂಡಾಗಿ, ಯೋಗ್ಯ ಬದುಕಿನ ದಾರಿ ಕಾಣದೆ ವೈಚಿತ್ರ್ಯಗಳ ಸುಳಿಯಲ್ಲಿ ಸಿಲುಕಿ ಚಡಪಡಿಸುತ್ತಿರುವನು. ಇಂದು ಕೊಲೆ, ಸುಲಿಗೆ, ದರೋಡೆ, ಆತ್ಮಹತ್ಯೆ, ಹುಚ್ಚು, ಮಾನಸಿಕ ಅಸ್ವಸ್ಥತೆ, ಅಶಾಂತಿ, ಅತೃಪ್ತಿ, ಅನ್ಯಾಯ, ಅಧರ್ಮಗಳೇ ಎಲ್ಲೆಲ್ಲೂ ತಾಂಡವವಾಡುತ್ತಿವೆ. ಇತಿಹಾಸದಲ್ಲಿ ಹೀಗೆ ನೆಮ್ಮದಿಯ ಹಾದಿ ತಪ್ಪಿದಾಗ ಉಪನಿಷತ್ತು, ಬುದ್ಧ, ಮಹಾವೀರ, ಭಕ್ತಿಪಂಥದ ಸಂತರು, ಅನುಭಾವಿಗಳು ಜನರನ್ನು ಕೈಹಿಡಿದು ಮುನ್ನಡೆಸಿರುವರು. ಅವರೆಲ್ಲರ ಅನುಭಾವದ ನುಡಿಗಳೇ ಇಂದು ನಮಗೆ ಮಾರ್ಗದರ್ಶಕವಾಗಬೇಕಿದೆ. ಅಂತಹ ಅಗ್ರಗಣ್ಯರಲ್ಲಿ ಸ್ವಾಮಿ ವಿವೇಕಾನಂದರು ಒಬ್ಬರಾಗಿರುವರು. ಅವರ ಬದುಕು ಮತ್ತು ಬರಹ ಚಿರಂತನಮೌಲ್ಯಗಳಿಂದ ಕೂಡಿದ್ದು, ಮನುಕುಲಕ್ಕೆ ಎಂದೆಂದಿಗೂ ಮಾರ್ಗದರ್ಶಕವಾಗಿವೆ. ಈ ಹಿನ್ನೆಲೆಯಲ್ಲಿ ಇಂದಿನ ಆಧುನಿಕ ಜಗತ್ತಿಗೆ ಸ್ವಾಮಿ ವಿವೇಕಾನಂದರ ಚಿಂತನೆಯ ಧಾರೆಗಳನ್ನು ಹಾಗೂ ಅದರ ಪ್ರಸ್ತುತತೆಯನ್ನು ಸ್ವಲ್ಪ ವಿವರವಾಗಿ ಇಲ್ಲಿ ಪರಿಶೀಲಿಸಬಹುದು.

ಸಕಲ ಮಾನವತೆಗೂ ಕಲ್ಯಾಣಕಾರಿಯಾದ ಚಿಂತನೆ ಸ್ವಾಮಿ ವಿವೇಕಾನಂದರದು. ಅವರ ಪ್ರಕಾರ ಇಂದಿನ ವಿದ್ಯಾಭ್ಯಾಸ ವ್ಯಕ್ತಿಯ ವ್ಯಕ್ತಿತ್ವದ ವಿಕಾಸಕ್ಕೆ ಸಹಾಯಕವಾಗದೆ, ಕೇವಲ ಮಾಹಿತಿಗಳ ಕೋಶವಾಗಿದೆ. ಇದರಿಂದ ವ್ಯಕ್ತಿಯ ವ್ಯಕ್ತಿತ್ವದ ತಿಳಿವಳಿಕೆಯ ಮಟ್ಟ ಶೂನ್ಯವಾಗಿದೆ. ವಿಷಯ ಸಂಗ್ರಹಣೆ ರಕ್ತಗತವಾಗದೆ ವ್ಯರ್ಥವಾಗಿದೆ; ನಿತ್ಯದ ಬದುಕನ್ನು ಹಸನುಗೊಳಿಸದ ಕೇವಲ ಬೌದ್ಧಿಕ ಹಾಗೂ ಮೌಖಿಕ ಪಾಂಡಿತ್ಯ ನಿಷ್ಪ್ರಯೋಜಕವಾದುದು. ಬದುಕನ್ನು ಸಂಪನ್ನಗೊಳಿಸದ ವಿದ್ಯೆ ಬೇಡ. ನಿತ್ಯದ ಬದುಕನ್ನು ಉದ್ಧರಿಸದ ಚಿಂತನೆ ನಿರರ್ಥಕ. ವಿದ್ಯೆ ವ್ಯಕ್ತಿಗಳ ಅಂತಃಶಕ್ತಿಯನ್ನು ಗಟ್ಟಿಗೊಳಿಸಬೇಕು. ವಿದ್ಯೆಯು ಅವನ ಮಾಂಸಖಂಡವನ್ನು ಕಬ್ಬಿಣದಂತೆ, ನರವನ್ನು ಉಕ್ಕಿನಂತೆ ಗಟ್ಟಿಗೊಳಿಸಿ ಪ್ರಚಂಡ ಇಚ್ಛಾಶಕ್ತಿಯನ್ನು ಅವನಲ್ಲಿ ತುಂಬಬೇಕು. ಬಲಿಷ್ಠ ದೇಹದಲ್ಲಿ ದೃಢಮನಸ್ಸು ಇರುತ್ತದೆ. ವಿದ್ಯೆ ಒಬ್ಬ ವ್ಯಕ್ತಿಯಲ್ಲಿ ಅಂತರ್ಗತವಾಗಿರುವ